# ಹಿಮೇಶ್ ದಾಂಪತ್ಯ ಸಂಗೀತ ಅಂತ್ಯ?

ಬಾಲಿವುಡ್‌ನಲ್ಲಿ ಜನಪ್ರಿಯತೆಯ ಉತ್ತುಂಗಕ್ಕೆ ಏರಿದಷ್ಟೇ ವೇಗವಾಗಿ ಮರೆಯಾದ ಹೆಸರು ಹಿಮೇಶ್ ರೇಶಮ್ಮಿಯಾ. 'ಆಶಿಕ್ ಬನಾಯಾ ಆಪ್ನೆ' ಸಿನಿಮಾ ಮೂಲಕ ಹಿಮೇಶ್ ರಾತ್ರೋ ರಾತ್ರಿ ದೇಶದಾದ್ಯಂತ ಗುರುತಿಸಿಕೊಂಡಾತ. ನಾಲ್ಕೈದು ಸಿನಿಮಾಗಳಿಗೇ ಆತನ ಬತ್ತಳಿಕೆಯಲ್ಲಿನ ಬಾಣಬಿರುಸುಗಳು ಹರಿತ ಕಳೆದುಕೊಂಡವು. ಮುಂದೆ ನಟನಾಗಿಯೂ ಅದೃಷ್ಟ ಪರೀಕ್ಷೆಗೆ ಒಡ್ಡಿಕೊಂಡ. ಫಲಿತಾಂಶ ಅನುತ್ತೀರ್ಣವಾಯಿತು. ಈಗ ಆತನ ದಾಂಪತ್ಯ ಗೀತೆಯೂ ಅಂತ್ಯವಾಗುವ ಸುಳಿವು ಬಂದಿದೆ.

ಹಿಮೇಶ್ ಮತ್ತು ಕೋಮಲ್ ಸಂಸಾರದಲ್ಲಿ ಸರಿಗಮ ಹಾಡುತ್ತಾ ಬರೋಬ್ಬರಿ 22 ವರ್ಷಗಳೇ ಉರುಳಿವೆ. ಇಷ್ಟು ಕಾಲ ಒಟ್ಟಿಗಿದ್ದ ದಂಪತಿ ಈಗ ಬೇರಾಗಲು ನಿರ್ಧರಿಸಿದ್ದಾರೆ. ಮೂಲಗಳ ಪ್ರಕಾರ ಇಬ್ಬರೂ ಕೆಲವು ಸಮಯದಿಂದ ದೂರವೇ ಇದ್ದರು. ಈ ಬೇರ್ಪಡುವಿಕೆಗೆ ಕಾನೂನಿನ ಸಮ್ಮತಿ ಪಡೆದುಕೊಳ್ಳಲು ಮುಂದಾಗಿದ್ದಾರೆ ಎನ್ನಲಾಗುತ್ತಿದೆ. ಇದಕ್ಕೆ ಕಾರಣ ಹಿಮೇಶ್‌ನ ವಿವಾಹೇತರ ಸಂಬಂಧ ಎನ್ನುವುದು ಮತ್ತೊಂದು ಮೂಲದ ಮಾಹಿತಿ. ನಟಿ ಸೋನಿಯಾ ಕಪೂರ್ ಜತೆಗಿನ ಹಿಮೇಶ್ ಸಂಬಂಧ, ಇಬ್ಬರ ದಾಂಪತ್ಯದಲ್ಲಿ ಬಿರುಕು ಮೂಡಿಸಿದೆ. ಆದರೆ ಅದರ ಕುರಿತು ಮಾತನಾಡಲು ಈ ದಂಪತಿ ನಿರಾಕರಿಸಿದ್ದಾರೆ.

ಇಬ್ಬರೂ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿರುವುದನ್ನು ಹಿಮೇಶ್ ಖಚಿತಪಡಿಸಿದ್ದಾನೆ. ಪರಸ್ಪರ ಗೌರವ ನೀಡುವುದು ಜೀವನದಲ್ಲಿ ಅತಿ ಮುಖ್ಯ. ಸಂಬಂಧದ ಮೇಲಿನ ಗೌರವದಿಂದಲೇ ದೂರಾಗಲು ನಿರ್ಧರಿಸಿರುವುದಾಗಿ ಆತ ಹೇಳಿಕೊಂಡಿದ್ದಾನೆ. ಮಗ ಸ್ವಯಂನನ್ನು ಇಬ್ಬರೂ ನೋಡಿಕೊಳ್ಳುವುದಾಗಿ ಒಪ್ಪಂದ ಮಾಡಿಕೊಂಡಿದ್ದಾಳೆ.





# ಪಿಗ್ಗಿ ತವರಿನ ಸೆಳೆತ

ಪ್ರಿಯಾಂಕಾ ಚೋಪ್ರಾ, ಡ್ವೇಯ್ನ್ ಜಾನ್ಸನ್ ಮತ್ತು ಜಾಕ್ ಎಫ್ರಾನ್ ಜತೆ ನಟಿಸಿರುವ ಮೊದಲ ಹಾಲಿವುಡ್ ಚಿತ್ರ 'ಬೇವಾಚ್'ನ ಟ್ರೇಲರ್ ಎಲ್ಲೆಡೆ ಭಾರಿ ಸದ್ದು ಮಾಡುತ್ತಿದೆ. ಈಜುಡುಗೆಯಲ್ಲಿ ಮಾದಕವಾಗಿ ಕಾಣಿಸಿಕೊಂಡಿರುವ 'ಪಿಗ್ಗಿ'ಯ ಬಗ್ಗೆ ಹಾಲಿವುಡ್, ಬಾಲಿವುಡ್ ಹೀಗೆ ಸಿನಿಮಾ ಘಮಲು ಹರಡಿರುವ ಜಾಗಗಳೆಲ್ಲ ಈಗ ಮಾತೋ ಮಾತು. ಈಗಾಗಲೇ ಆಕೆ ಮುಖ್ಯಪಾತ್ರದಲ್ಲಿ ನಟಿಸುತ್ತಿರುವ ಅಮೆರಿಕದ ಟೆಲಿವಿಷನ್ ಸರಣಿ 'ಕ್ವಾಂಟಿಕೊ'ದ ಎರಡನೆಯ ಆವೃತ್ತಿಯಲ್ಲಿ ಬಿಜಿಯಾಗಿದ್ದಾಳೆ. ಅಲ್ಲದೆ, ಅಮೆರಿಕ ಟೆಲಿವಿಷನ್ ಕಾರ್ಯಕ್ರಮಗಳ ಜನರ ಆಯ್ಕೆ ಪ್ರಶಸ್ತಿಗೆ ಸತತ ಎರಡನೆಯ ಸಲ ನಾಮನಿರ್ದೇಶನಗೊಂಡಿದ್ದಾಳೆ. ಕಳೆದ ಬಾರಿ ಕೈತಪ್ಪಿದ್ದ ಪ್ರಶಸ್ತಿ, ಈ ವರ್ಷ ತನಗೆ ಒಲಿಯಬಹುದು ಎಂಬ ನಿರೀಕ್ಷೆ ಮೂಡಿದೆ.

ಹಾಲಿವುಡ್ ಅಂಗಳದಲ್ಲಿ ಅಡ್ಡಾಡುತ್ತಿರುವ ಆಕೆಗೆ ತವರು ಬಾಲಿವುಡ್‌ನ ನೆನಪು ಆಗಾಗ ತೀವ್ರವಾಗಿ ಕಾಡುತ್ತಿರುತ್ತದೆಯಂತೆ. ಬಾಲಿವುಡ್ ಸಿನಿಮಾಗಳಲ್ಲಿ ನಟಿಸಲು ಆಕೆಗೆ ಸದ್ಯಕ್ಕೆ ಆಗುತ್ತಿಲ್ಲ. ಇನ್ನು ಸಿನಿಮಾಗಳನ್ನು ನೋಡಲೂ ಆಕೆಗೆ ಬಿಡುವು ಸಿಗುತ್ತಿಲ್ಲ. ಹೀಗಾಗಿ ಹಿಂದಿ ಸಿನಿಮಾಗಳನ್ನು ಅತಿಯಾಗಿ ಮಿಸ್ ಮಾಡಿಕೊಳ್ಳುತ್ತಿರುವುದಾಗಿ ಆಕೆ ಟ್ವೀಟ್ ಮಾಡಿದ್ದಾಳೆ.ಯಾವಾಗ ಬಿಟೌನ್‌ಗೆ ಕಾಲಿಟ್ಟು ಮತ್ತೆ ಬಣ್ಣಹಚ್ಚುವೆನೋ ಎಂಬ ಕಾತರ ಮೂಡಿದೆ ಎಂದಿದ್ದಾಳೆ ಪಿಗ್ಗಿ. ಹಾಲಿವುಡ್‌ನ ಮೆಟ್ಟಿಲುಗಳನ್ನೇರುತ್ತಿರುವ ಈ ಹೊತ್ತಿನಲ್ಲಿ ತವರು ಮನೆಗೆ ಬಂದು ಹೋಗುವುದು ಸುಲಭವಲ್ಲ ಎಂದು ಆಕೆಗೂ ಗೊತ್ತು.